ವಿದ್ಯುತ್ ದರ, ಮಾರಾಟ ತೆರಿಗೆ, ವಿಲಾಸಿ ತೆರಿಗೆಗಳಲ್ಲೂ ಕೂಡ ಟ್ಯಾಕ್ಸ್ ಶುಲ್ಕ, ನೋಂದಣಿ ಶುಲ್ಕಗಳಲ್ಲಿ 3 ರಿಂದ 7 ಪರ್‌ಸೆಂಟ್‌ವರಗೆ ವಿನಾಯಿತಿ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ. ಈ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಘಟಕಗಳನ್ನು ಸ್ಥಾಪಿಸಲು ಹೆಚ್ಚಿನ ಅವಕಾಶವಿದ್ದು ಅದರಲ್ಲಿಯೂ ಬೀಚ್ ರಿಸಾರ್ಟ್‌ಗಳನ್ನು ಕೇರಳ ಹಾಗೂ ಗೋವಾ ಮಾದರಿಯಲ್ಲಿ ಮಾಡಲು ಖಾಸಗಿ ಉದ್ಯಮಗಳು ಮುಂದೆ ಬಂದರೆ ಅವರಿಗೆ ಪ್ರೋತ್ಸಾಹ ಕೊಟ್ಟು ನಮ್ಮ ಸರ್ಕಾರದಿಂದ ಲಭಿಸುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತದೆ.

ಶ್ರೀ ಎನ್.ಯೋಗೇಶ್ ಭಟ್ : ಮಾನ್ಯ ಅಧ್ಯಕ್ಷರೇ, ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 5 ಕೋಟಿ ರೂಪಾಯಿ ಪರಿಹಾರಧನವನ್ನು ಕೊಟ್ಟಲ್ಲಿ 120 ಕೋಟಿ ರೂಪಾಯಿ ನೆರವು ಬರುತ್ತದೆ. ಅನೇಕ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿಗರೂ ಕೂಡ ಬರುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಹಲವು ತಿಂಗಳಿಂದ ಪೆಂಡಿಂಗ್ ಇರುವ ಫೈಲನ್ನು ಕ್ಲಿಯರ್ ಮಾಡಿ ನಿರ್ವಸಿತರಿಗೆ ಬೇಕಾಗುವ ಪುನರ್‌ವಸತಿ ಮತ್ತೆ ಪರಿಹಾರವನ್ನು ಕೊಡಲು ಸಾಧ್ಯವೇ ? ಅದನ್ನು ತಕ್ಷಣ ಮಾಡಿದಲ್ಲಿ 120 ಕೋಟಿ ರೂಪಾಯಿ ಕೇಂದ್ರದ ನೆರವು ನಮಗೆ ಬರಲಿಕ್ಕೆ ಸಾಧ್ಯವಾಗುತ್ತದೆ. ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಆಗುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : 5 ಕೋಟಿ ರೂ ರಿಲೀಸ್ ಮಾಡಿ ಎಂದು ಫೈಲ್ ಬಂದಿದೆಯಂತೆ. ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೇಳುತ್ತಾರೆ. 120 ಕೋಟಿ ರೂಪಾಯಿಗಳನ್ನು ಸೆಂಟ್ರಲ್ ಗೌರ್ನಮೆಂಟ್‌ನವರು ಕೊಡುತ್ತಾರಂತೆ 5 ಕೋಟಿ ರೂ ಬಗ್ಗೆ ತಮ್ಮ ಕಡೆಗೆ ಫೈಲ್ ಇದೆ ಎಂದು ಹೇಳುತ್ತಾರೆ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು) : ಪ್ರಪೋಸಲ್ಸ್ ಕಳುಹಿಸಿದ್ದರೆ ನಾನು ಒಪ್ಪುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿನ ರಸ್ತೆಗಳಿಗೆ ಹಣ ಬಿಡುಗಡೆ

123 (904) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆಯಿಂದ ಲೋಕೋಪಯೋಗಿ ಇಲಾಖೆಯ ಬಹಳಷ್ಟು ರಸ್ತೆಗಳು ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

(ಇ) ರಸ್ತೆಗಳ ದುರಸ್ತಿಗಾಗಿ ಬಿಡುಗಡೆ ಮೊದಲಾದ ಹಣ ಎಷ್ಟು ?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಲೋಕೋಪಯೋಗಿ ಇಲಾಖೆಯಲ್ಲಿ ಲಭ್ಯವಿರುವ ವಾರ್ಷಿಕ ರಸ್ತೆ ದುರಸ್ತಿ ನಿರ್ವಹಣೆ ಅನುದಾನ ಮತ್ತು ಮಳೆ ಹಾನಿ ಅನುದಾನ ಹಾಗೂ ಜಿಲ್ಲಾಧಿಕಾರಿಗಳ (ಸಿ.ಆರ್.ಎಫ್) ಅನುದಾನಗಳನ್ನು ಉಪಯೋಗಿಸಿಕೊಂಡು ರಸ್ತೆಗಳನ್ನು ದುರಸ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಿರಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ.

ಇ) ರಾಜ್ಯದಲ್ಲಿನ ಲೋಕೋಪಯೋಗಿ ಇಲಾಖೆ ರಸ್ತೆಗಳಿಗೆ ಅತಿವೃಷ್ಟಿ ಪರಿಹಾರ ನಿಧಿಯಿಂದ (ಸಿ.ಆರ್.ಎಫ್) 8.00 ಕೋಟಿ ರೂ.ಗಳು ಬಿಡುಗಡೆಯಾಗಿರುತ್ತದೆ. ಶಿವಮೊಗ್ಗ ಜಿಲ್ಲೆಗೆ ಜಿಲ್ಲಾಧಿಕಾರಿಗಳಿಂದ 32.00 ಲಕ್ಷ ರೂಮತ್ತು ಸಿ.ಆರ್.ಎಫ್ ನಿಂದ 20.00 ಲಕ್ಷರೂ.ಗಳು ಬಿಡುಗಡೆಯಾಗಿದೆ. ಇದಲ್ಲದೇ ವಾರ್ಷಿಕ ನಿರ್ವಹಣೆಗೆ ಯೋಜನೇತರ ಶೀರ್ಷಿಕೆಯಡಿ 506.43 ಲಕ್ಷ ರೂ.ಗಳು ಬಿಡುಗಡೆಯಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ರಸ್ತೆಗಳ ದುರಸ್ತಿಗೆ ವಾರ್ಷಿಕ ದುರಸ್ತಿ ನಿರ್ವಹಣೆ ಅನುದಾನ ಮತ್ತು ಫ್ಲಡ್ ರಿಲೀಫ್ ಫಂಡ್‌ನಲ್ಲಿ ಒಟ್ಟು ಸೇರಿಸಿ ಈಗಾಗಲೇ ಹಣ ಕೊಟ್ಟಿದ್ದೇವೆ. ವಾಹನ ಸಂಚಾರಕ್ಕೆ ಯೋಗ್ಯ ಇರಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಈ ಹಣ ಕೊಟ್ಟಿದ್ದು ಯಾವಾಗ ಇವರ ಪ್ರಯತ್ನ ಮುಗಿಯುವುದು ಯಾವಾಗ ? ಅದು ಫಲ ಕೊಡುವುದು ಯಾವಾಗ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡಬೇಕು. ಕಾರಣ ನಮ್ಮ ಜಿಲ್ಲೆಯ ಯಾವುದೇ ರಸ್ತೆಯಲ್ಲಿ ಹೋದರೂ ನೀವು ಸರಿಯಾಗಿ ಹೋಗಲಿಕ್ಕೆ ಆಗುವುದಿಲ್ಲ. ನಾವು ಹೊಸ ರಸ್ತೆಯನ್ನು ಕೇಳುತ್ತಿಲ್ಲ. ಹೊಂಡ ಗುಂಡಿಯನ್ನು ಮುಚ್ಚಲಿಕ್ಕಾಗಿಲ್ಲ. ಒಂದು ಬ್ಯಾರೆಲ್ ಟಾರ್ ಇಲ್ಲ.

ನಿಮ್ಮ ಎಕ್ಸಿಕ್ಯೂಟೀವ್ ಇಂಜಿನಿಯರ್ ಹಾಗೂ ಸೂಪರಿಂಟೆಂಡಿಂಗ್ ಇಂಜನಿಯರ್ ಅವರನ್ನು ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲ, ನಾವೇನೂ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿ ಕೈ ಎತ್ತಿದ್ದಾರೆ. 506.43 ಲಕ್ಷ ರೂಪಾಯಿಗಳು, ನಿರ್ವಹಣೆಗೆ ಯೋಜನೇತರ ಶೀರ್ಷಿಕೆ ಅಡಿಯಲ್ಲಿ ಶಿವಮೊಗ್ಗ ಜಿಲ್ಲೆಗೆ ಬಿಡುಗಡೆ ಆಗಿದೆ ಎಂದು ತಾವು ಉತ್ತರವನ್ನು ಕೊಟ್ಟಿದ್ದೀರಿ. ಈ ಹಣ ಸಂಬಳಕ್ಕೆ ಹೋಗಿದೆಯೋ ಟಾರ್ ಬ್ಯಾರೆಲ್ ಕೊಳ್ಳುವುದಕ್ಕೆ ಹೋಗಿದೆಯೋ ಎಲ್ಲಿಗೆ ಹೋಗಿದೆ ಎಂಬುದನ್ನು ತಾವು ತಿಳಿಸಬೇಕು ನೀವು ಕೊಟ್ಟರತಕ್ಕ ಹಿಂದಿನ ಬಿಲ್ಲನ್ನು ಕೊಡಲಿಕ್ಕೆ ಚುಕ್ತಾ ಮಾಡಿಕೊಂಡಿದ್ದಾರೆ. ಹೊಸದಾಗಿ ಹೊಂಡ ಗುಂಡಿಯನ್ನು ತುಂಬಲಿಕ್ಕೆ ಯಾವುದೇ ಕಾರ್ಯಕ್ರಮವನ್ನು ನಮ್ಮ ಜಿಲ್ಲೆಯಲ್ಲಿ ಹಾಕಿಕೊಂಡಿಲ್ಲ. ಅದಕ್ಕಾಗಿ ಇದನ್ನು ಯಾವಾಗ ಮುಗಿಸುತ್ತೀರಿ ? ಆ ರಸ್ತೆಗಳಲ್ಲಿ ಹೊಂಡ ಗುಂಡಿಯನ್ನು ಮುಚ್ಚಿ ನಾವು ಮರ್ಯಾದೆಯಿಂದ ಚುನಾವಣೆ ವರ್ಷದಲ್ಲಿ ತಿರುಗಾಟ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ತಾವು ದಯಮಾಡಿ ಹೇಳಬೇಕು.

ಅಧ್ಯಕ್ಷರು : ಚುನಾವಣೆ, ಮರ್ಯಾದೆ ಎರಡೂ ಒಟ್ಟಿಗೇ ಹೋಗುವುದಿಲ್ಲ. ಚುನಾವಣೆ ಬೇರೆ, ಮರ್ಯಾದೆ ಬೇರೆ.

ಶ್ರೀ ಉಮೇಶ್ ವಿ. ಕತ್ತಿ : ಶಿವಮೊಗ್ಗ ಜಿಲ್ಲೆಯಲ್ಲಿನ ಏಳು ತಾಲ್ಲೂಕಿಗೆ 506 ಕೋಟಿ ರೂಪಾಯಿ ನಾನ್ ಪ್ಲಾನ್‌ನಿಂದ, ಜಿಲ್ಲಾಧಿಕಾರಿಗಳ (ಸಿ.ಆರ್.ಎಫ್) ನಿಂದ 32 ಲಕ್ಷ ರೂಪಾಯಿ, ಸಿಆರ್‌ಎಫ್‌ನಿಂದ 20 ಲಕ್ಷ ರೂಪಾಯಿ ಈ ರೀತಿ ದುಡ್ಡನ್ನು ಬಿಡುಗಡೆ ಮಾಡಿ ಈ ಜಿಲ್ಲೆಯ ರಸ್ತೆಗಳ ಗುಂಡಿಯನ್ನು ತುಂಬುವುದರ ಜೊತೆಗೆ ವಾಹನಗಳು ಸರಿಯಾಗಿ ಓಡಾಡಲು ಸರಿಯಾದಂತಹ ರಸ್ತೆ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದರೆ ಅವರು ರಸ್ತೆ ಆಗಿಲ್ಲ ಎಂದು ಹೇಳುತ್ತಾರೆ. ಅಂತಹದು ಏನಾದರೂ ಮಾಹಿತಿ ಇದ್ದರೆ ಕೊಡಲಿ ಏಕೆಂದರೆ ಮಾರ್ಚ್ ಅಂತ್ಯದವರೆಗೆ ಕೆಲಸ ಮಾಡಬೇಕೆಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಮಾರ್ಚ್ ಅಂತ್ಯದವರೆಗೆ ಆಗದೇ

ಇದ್ದರೂ ಮೇ ಎಂಡ್‌ರವರೆಗೆ ಬೇಸಿಗೆ ಇರುವುದರಿಂದ ಗುಂಡಿಗಳನ್ನು ಮುಚ್ಚುವುದಕ್ಕೆ ಸಾಧ್ಯವಾಗುತ್ತದೆ. ಆದರೂ ಮಾರ್ಚ್ ಎಂಡ್‌ಒಳಗೆ ಈ ಕಾರ್ಯಕ್ರಮವನ್ನು ಮಾಡಬೇಕೆಂದು ಸಂಬಂಧಪಟ್ಟ ಎಲ್ಲಾ ಇಂಜಿನಿಯರ್‌ಗಳಿಗೆ ಆದೇಶವನ್ನು ಕೊಡಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಅಂತಹದು ತೊಂದರೆ ಆಗಿದ್ದರೆ ಅದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ ಅದನ್ನು ಸರಿ ಮಾಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಗಮನಿಸಬೇಕು. ನನಗೆ ತುಂಬಾ ಸಂತೋಷವಾಯಿತು. ಹತ್ತಿರ ಹತ್ತಿರ ಸುಮಾರು ಐದೂವರೆ ಕೋಟಿ ರೂಪಾಯಿಯನ್ನು ನಮ್ಮ ಜಿಲ್ಲೆಗೆ ಬಿಡುಗಡೆ ಮಾಡಿದ್ದಾರೆ. ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಈ ಐದೂವರೆ ಕೋಟಿ ರೂಪಾಯಿ ಹಾಗಾದರೆ ಎಲ್ಲಿಗೆ ಹೋಯಿತು ? ಏಳು ತಾಲ್ಲೂಕಿನಲ್ಲಿ ಹತ್ತಿರ ಹತ್ತಿರ 70 ರಿಂದ 80 ಲಕ್ಷ ರೂಪಾಯಿಗಳು ಪ್ರತಿ ಒಂದು ಅಸ್ಸೆಂಬ್ಲಿ ಕ್ಷೇತ್ರಕ್ಕೆ ಬಿಡುಗಡೆ ಆಗಿದೆ. ಒಂದೂ ಗುಂಡಿ ಮುಚ್ಚಿಲ್ಲ. ಯಾವ ರಸ್ತೆಯೂ ಓಡಾಡುವ ಸ್ಥಿತಿಯಲ್ಲಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿರುವುದು, ನಿಜಕ್ಕೂ ಹಣ ಬಿಡುಗಡೆ ಆಗಿದ್ದರೆ ಇಲ್ಲೆಲ್ಲಿಯೂ ದುರಪಯೋಗ ಎಂದು ಅನಿಸುತ್ತದೆ. ದಯವಿಟ್ಟು ಇದರ ಬಗ್ಗೆ ಒಂದು ತನಿಖೆಯಾದರೂ ಮಾಡಿಸಿ. ಇಷ್ಟೊಂದು ಕಷ್ಟಪಟ್ಟು ನೀವು ಐದೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡಿರುವಂತಹ ಸಂದರ್ಭದಲ್ಲಿ ಒಂದೂ ತಾಲ್ಲೂಕಿನಲ್ಲಿ ಈ ರೀತಿ ಕೆಲಸ ಆಗಿಲ್ಲದೇ ಇರುವಂತಹ ಸಂದರ್ಭದಲ್ಲಿ ಮಾನ್ಯ ಜ್ಞಾನೇಂದ್ರ ಅವರು ತಿಳಿಸಿದ ಹಾಗೆ ಎಲ್ಲಾ ಕಡೆ ಗುಂಡಿ ಇದೆ. ಟಾರ್ ಇಲ್ಲ ಎಂದು ಹೇಳುತ್ತಾರೆ. ಮತ್ತೊಂದು ಇಲ್ಲ ಎಂದು ಹೇಳುತ್ತಾರೆ. ಕೆಲಸ ಮಾಡಿಸಿ ಎಂದು ಹೇಳಿದರೆ ಎಲ್‌ಓಸಿ ಬಂದಿಲ್ಲ ಎಂದು ಹೇಳುತ್ತಾರೆ. ಹಣ ಬಿಡುಗಡೆಯೂ ಆಗಿದೆ. ಹಾಗಾದರೆ ಇದನ್ನು ಎನ್‌ಕ್ವೈರಿ ಆದರೂ ಮಾಡಿ ತಪ್ಪಿತಸ್ಥರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೇ, ಟೋಟಲ್ ಆಗಿ 5 ಕೋಟಿ 60 ಲಕ್ಷ ರೂಪಾಯಿಯಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಅವರು ಹೇಳಿದ ಹಾಗೆ ಪ್ರತಿ ತಾಲ್ಲೂಕಿಗೆ 80 ಲಕ್ಷ ರೂಪಾಯಿಯಷ್ಟು ಹಣ ಹೋಗುತ್ತದೆ. ಆದರೆ ಈ ಗುಂಡಿ ತುಂಬುವ ಕಾರ್ಯಕ್ರಮದಲ್ಲಿ ನಮಗೆ ಟಾರ್ ಸರಿಯಾಗಿ ಸರಬರಾಜು ಆಗುತ್ತಿಲ್ಲ. ಈಗ ಎಲ್ಲಾ ರಾಜ್ಯದಿಂದಲೂ ಬೇಡಿಕೆ ಹೆಚ್ಚಾಗಿರುವುದರಿಂದ ಸರಿಯಾಗಿ ಟಾರ್ ಸಿಕ್ಕದೇ ಇರುವುದರಿಂದ ತೊಂದರೆ ಆಗಿರಬಹುದು. ಆದರೂ ತಮಗೆ ಏನಾದರೂ ದುರುಪಯೋಗ ಆಗಿದೆ ಎಂದು ಅನಿಸಿದರೆ ಇದರ ಬಗ್ಗೆ ಸರಿಯಾದ ತನಿಖೆ ನಡೆಸಿ ಕ್ರಮ ಕೈಗೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಲೋಕೋಪಯೋಗಿ ಇಲಾಖೆಯಲ್ಲಿನ ರಸ್ತೆಗಳ ಡಾಂಬರೀಕರಣ

125(869) ಶ್ರೀ ವಸಂತ ವಿ.ಸಾಲಿಯಾನ (ಕಾಪು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) 1998-99ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖಾ ಅಧೀನದಲ್ಲಿರುವ ರಸ್ತೆಗಳ ಅಭಿವೃದ್ಧಿಗಾಗಿ ಡಾಂಬರೀಕರಣಕ್ಕಾಗಿ ಒದಗಿಸಲಾದ ಹಣ ಎಷ್ಟು ?

(ಆ) ಇದರಲ್ಲಿ ಖರ್ಚು ಮಾಡಲಾದ ಹಣ ಎಷ್ಟು ಹಾಗೂ ಅಭಿವೃದ್ಧಿಗೊಳಿಸಿದ ರಸ್ತೆಗಳ ಸಂಖ್ಯೆ ಎಷ್ಟು ?